ಉಸಿರು ನಿಲ್ಲೋ ಮೊದಲೇ ಕಲಿಕೆ ನಿಲ್ಲಿಸಿದರೆ, ಎಷ್ಟು ಕಾಲ ಜೀವಿಸಿದ್ರೂ ಸುಖವಿಲ್ಲ' ಎಂದು ನಕ್ಕು ರಾನಡೆ, 'ಯಾರೇ ಆಗಲಿ, ಯಾರಿಗಾದ್ರೂ ಕಲಿಸುವ ಅವಕಾಶ ಮಾಡಿಕೊಟ್ರೆ ಖಂಡಿತ ಬರ್ತೀನೆ ಅಂತ ಬನ್ನಿ ಅನ್ನೋರಿಗೆ ಹೇಳ್ತೀನೆ. ಕಲಿಸುವ ಅವಕಾಶಕ್ಕಂತ್ಲೇ ಅಲ್ಲ. ನಾನು ಯಾರು ಕರೆದ್ರೂ ಕರೆದಲ್ಲಿಗೆ ಹೋಗ್ತೀನೆ. ಅವರು ಕೇಳುವ ಪ್ರಶ್ನೆಗಳಿಗೆಲ್ಲ ಉತ್ತರಿಸುತ್ತಾ ಒಂದೆರಡು ದಿವಸ ಅವರ ಜೊತೆ ಸಂತೋಷವಾಗಿದ್ದು ಅಲ್ಲಿಂದ ಹೊರಡುತ್ತೇನೆ. ಕೆಲವು ಕಡೆ ಬಹಳ ಆದರ ಆತಿಥ್ಯ ನೀಡಿ ಮತ್ತೂ ಎರಡು ದಿನ ನಿಲ್ಲಿಸಿಕೊಳ್ತಾರೆ. ನಾನು ಭಿಕ್ಷುವೋ ಭಿಕ್ಷುಕನೋ ನಂಗೆ ಗೊತ್ತಿಲ್ಲ. ಪೆನ್ಶನ್ ಇದೆ. ಎಲ್ಲಿಗೂ ಹೋಗದೆ ಏನೂ ಮಾಡದೆ ಮನೆಯಲ್ಲೇ ಇರಲು ಸಾಧ್ಯವಿದೆ. ಮಕ್ಕಳು ಒಳ್ಳೆಯ ಸಂಪಾದನೆ ಮಾಡ್ತಾರೆ. ನಿಂಗೆ ಗೊತ್ತಿದೆ. ಇಬ್ಬರು ಗಂಡು ಮಕ್ಕಳು, ಅವರಿಗೆ ಉಸಿರು ಬಿಡಲಾಗದಷ್ಟು ಕೆಲಸದ ಒತ್ತಡವಂತೆ. ಭಾರತಕ್ಕೆ ಆರೇಳು ವರ್ಷಗಳಿಗೊಮ್ಮೆ ಬಂದು ಒಂದು ವಾರ ಇದ್ದು ಹೋಗ್ತಾರೆ. ನನ್ನನ್ನು ನನ್ನ ಹೆಂಡತಿ ಚೆನ್ನಾಗಿ ನೋಡಿಕೊಳ್ತಾಳೆ. ಹಾಗಂತ ನಾವು ನಮ್ಮೊಳಗೇ ಹುಟ್ಟಿಸಿ ಬೆಳೆಸುವ ಭಾವನೆಗಳಲ್ಲಿ ಹುದುಗಿಕೊಂಡು ಸಂತೋಷದಿಂದ ಇರಲು ಸಾಧ್ಯವೆ ನೀನೇ ಹೇಳು ನರಹರಿ' ಎಂದರು ರಾನಡೆ. ನಿಜವಾಗಿಯೂ ಮೋಹ ಬಹಳ ಸುಂದರ, ಅಲ್ವಾ ನರಹರಿ?

'ಈ ಪ್ರಶ್ನೆಗೆ ನಾನು ಕೈ ಎತ್ತುವುದಿಲ್ಲ ಸರ್' ಎಂದು ನಕ್ಕ ನರಹರಿ ನಕ್ಕು,' ಪ್ರಶ್ನೆ ನಾನೇ ಕೇಳಬೇಕಾಗಿದೆ, ನೀವು ನನಗೆ ಹಾಕಿದ ಪ್ರಶ್ನೆಯನ್ನು ಸ್ವಲ್ಪ ಬಿಡಿಸಿ ಹೇಳಿ ಸರ್' ಎಂದ.

ಈಗ ರಾನಡೆಯ ಮುಖದಲ್ಲಿಯೂ ನಗು ಮೂಡಿತು. ರಾನಡೆ ಹೇಳಿದರು, 'ಅದನ್ನು ಬಿಡಿಸಿದರೆ ಏನೆಲ್ಲ ಹೊರಬರುತ್ತೆ ನರಹರಿ ಅದೆಲ್ಲ ನಿನಗೆ ಇಷ್ಟವಾಗಲಿಕ್ಕಿಲ್ಲ' ಎಂದರು ರಾನಡೆ.

'ನಂಗೆ ನೀವು ಏನು ಹೇಳಿದರೂ ಇಷ್ಟವಾಗುತ್ತೆ ಸರ್, ಹೇಳಿ'

'ಕೆಲಸದಿಂದ ನಿವೃತ್ತಿ ಆದ ಮೇಲೆ, ಬಹಳ ಸಲ ನಂಗೆ ಅನಿಸಿತು ನರಹರಿ, ನನ್ನ ಮನೆ ಅಂತ ಭಾವಿಸಿ ಮನೇಲೆ ಇರೋದು ಹಾಗೆ ಇರುವವನಿಗೂ ಇಷ್ಟ ಅಲ್ಲ, ಮನೆಯಲ್ಲಿರುವ ಇತರರಿಗೂ ಇಷ್ಟ ಅಲ್ಲ ಅಂತ'

ನಿಮ್ಮ ಮಾತುಕೇಳಿದರೆ, 'ಓಲ್ಡ್ ಏಜ್ ಈಸ್ ಎ ಕರ್ಸ್'' ಅಂತ ಒಬ್ಬ ಇಂಗ್ಲಿಷ್ ಲೇಖಕ ಹೇಳಿದ್ದು ನೆನಪಿಗೆ ಬರುತ್ತದೆ ಸರ್'

'ನನಗೂ ನೆನಪಿಗೆ ಬರುತ್ತಿರುತ್ತೆ. ಇರಲಿ. ನನ್ನ ಹೆಂಡತಿ ಮತ್ತು ನಾವು ತರುಣದಲ್ಲಿದ್ದುದಕ್ಕಿಂತ ಈ ವಯಸ್ಸಿನಲ್ಲಿಯೇ ಹೆಚ್ಚು ಆರಾಮವಾಗಿದ್ದೇವೆ. ಆದರೆ ಅದಕ್ಕಾಗಿ ಒಂದು ಔಷಧ ಇದೆ. ಅದನ್ನು ಸೇವಿಸುತ್ತಾ ಇರುತ್ತೇವೆ' ಎಂದು ರಾನಡೆ ನಕ್ಕರು.

'ಏನು ಔಷಧಿ ಸರ್ ಅದು?' ನರಹರಿ ಕುತೂಹಲದಿಂದ ಕೇಳಿದ.

'ಬಹಳ ಸರಳವಾದ, ನೂರಾ ಒಂದು ಗುಣಗಳಿಂದ ಕೂಡಿದ ಔಷಧಿ ಅದು, ಅದರ ಹೆಸರು ಮೌನ' ಎಂದು ನಕ್ಕರು ರಾನಡೆ.

ನರಹರಿಯೂ ನಕ್ಕು, 'ಬಿಚ್ಚಿ ಹೇಳಿ ಅಂದರೆ ಮುಚ್ಚಿ ಹೇಳ್ತಿದ್ದೀರಲ್ಲಾ, ಸರ್?' ನರಹರಿಯೆಂದ.

ಸ್ವಲ್ಪ ಹೊತ್ತು ಸುಮ್ಮನಿದ್ದು ರಾನಡೆ ಹೇಳಿದರು,

'ನಾನು ಇಂಗ್ಲಿಷ್ ಮೇಸ್ಟ್ರು ಅಂತ ನಿಂಗೆ ಹೇಳ್ಬೇಕಾಗಿಲ್ಲ. ನನ್ನ ಹೆಂಡತಿ ಸುರಭಿ ಬಾಟನಿಯಲ್ಲಿ ಎಮ್ಮೆಸ್ಸೀ ಮಾಡಿದಳು. ಪುಣೆ ಯೂನಿವರ್ಸಿಟಿಯಲ್ಲಿ ಸೆಕೆಂಡ್ ರ್‍ಯಾಂಕ್ ಪಡೆದಳು. ಅವಳಿಗಿದ್ದ ಒಂದೇ ಆಸೆ ಎಂದರೆ ಇಂಗ್ಲೆಂಡಿಗೆ ಹೋಗಬೇಕು, ಅಲ್ಲಿ ಬಾಟನಿಯಲ್ಲಿ ಪಿಎಚ್‌ಡಿ ಮಾಡಬೇಕು, ಜೊತೆಗೆ ಏನಾದರೂ ಮಾಡಿ ಒಂದು ಜಾಬ್ ಪಡೆದುಕೊಂಡು ನಾನು ಕೂಡ ಅವಳ ಜೊತೆ ಹೋಗಬೇಕು ಅನ್ನೋದು. ಒಂದು ದಿನ, ಸುರಭಿಯ ಇಂಗ್ಲೆಂಡ್ ಜಪವನ್ನು ಸಹಿಸುವುದು ಕಷ್ಟವಾಗಿ, 'ಸುರಭಿ, ನಿನಗೆ ಇಂಗ್ಲೆಂಡಿನ ಮೇಲೆ ಇರುವಷ್ಟು ಪ್ರೀತಿ ನನಗೆ ಇಲ್ಲ, ಯಾಕೆಂದರೆ, ಅವರು ನಮ್ಮ ದವಸ ಧಾನ್ಯಗಳನ್ನು ಕೂಡ ಇಂಗ್ಲೆಂಡಿಗೆ ಒಯ್ದು ಚೆನ್ನಾಗಿ ತಿಂದು, ನಮಗೆ ರೇಶನ್ ಎಂಬ ಪಿಶಾಚಿಯನ್ನು ಕೊಟ್ಟು, ಮೃಗ ಪಕ್ಷಿಗಳು ಕೂಡ ಮುಟ್ಟದಂಥ ಆಹಾರಧಾನ್ಯಗಳನ್ನು ನಮಗೆ ತಿನ್ನಿಸಿ, ನಮ್ಮ ದೇಶಕ್ಕೆ ಕಡು ದಾರಿದ್ರ್ಯವನ್ನು ತಂದಿತ್ತವರು. ನನಗೆ ಇಂಗ್ಲೆಂಡ್ ಬೇಡ' ಎಂದೆ. ಕೂಡಲೇ ಸುರಭಿ, 'ನೀವು ಇಂಗ್ಲಿಷ್ ಕಲಿಸುತ್ತಿದ್ದೀರಿ' ಎಂದಳು.

'ಇಂಗ್ಲಿಷಿನ ಮೇಲೆ ನನಗೆ ಪ್ರೀತಿ ಇದೆ. ಇಂಗ್ಲಿಷ್ ಸಾಹಿತ್ಯದ ಮೇಲೆ ಪ್ರೀತಿ ಇದೆ. ಇಂಗ್ಲೆಂಡನ್ನು ನಾನು ದ್ವೇಷಿಸುವುದಿಲ್ಲ; ಆದರೆ ಪ್ರೀತಿಸುವುದಿಲ್ಲ' ಎಂದು ನಗುತ್ತಾ ನಾನು ಹೇಳಿದೆ, 'ನಿನಗೆ ನನ್ನ ಮೇಲೆ ಇರುವ ಪ್ರೀತಿ ಅನನ್ಯವಾದುದು ಅಂತ ನನಗೆ ಗೊತ್ತು ಸುರಭಿ, ಆದರೆ ನಿನ್ನ ಮಾತಿನ ವರಸೆ ಕೆಲವು ಸಲ ನನ್ನ ಉಸಿರನ್ನು ತಡೆಯುತ್ತದೆ' ಎಂದೆ. ಅವತ್ತು ನನ್ನ ಜೊತೆ ಮಾತು ನಿಲ್ಲಿಸಿದ ಸುರಭಿ ಎರಡು ತಿಂಗಳು ಮಾತೇ ಆಡಲಿಲ್ಲ

ಹಲವು ಎಡರು ತೊಡರುಗಳಿಂದಾಗಿ, ಸುರಭಿಯ ಇಂಗ್ಲೆಂಡಿಗೆ ಹೋಗುವ ಪ್ರಯತ್ನ ಫಲಿಸಲಿಲ್ಲ ಎಂಬುದನ್ನು ವಿವರಿಸಿದರೆ ಅದು ಒಂದು ನವ್ಯ ಪುರಾಣವಾದೀತು. ಆದ್ದರಿಂದ ಹೇಳುವುದಿಲ್ಲ ಅದರಲ್ಲಿ ಮುಖ್ಯವಾದ ಕಾರಣವೆಂದರೆ, ನನ್ನ ಪಾಪ. ಅದಕ್ಕೆ ಪರಿಹಾರವಿಲ್ಲದ್ದರಿಂದ ನಾನು ಮೌನದಲ್ಲಿ ಮುಳುಗಿದೆ. ಸುರಭಿಯಾದರೂ ಏನು ಮಾಡಿಯಾಳು? ಅವಳು ಕೂಡ ಮೌನದಲ್ಲಿ ಮುಳುಗಿದಳು. ನನಗೆ ರೂಪರಹಿತ ಪಾಪ ಪ್ರಜ್ಞೆಯಿಂದ ಹೊರಬರಲಾಗಲಿಲ್ಲ. ಸುರಭಿ ಸುಂದರವಾದ ಗಂಡು ಮಗುವನ್ನು ಹೆತ್ತು ಸಂತಸದಿಂದ ಹೊರಬಂದಳು. ಆಕೆಗೆ ಪಾಪಪ್ರಜ್ಞೆ ಇರಲಿಲ್ಲವೆ ಎಂಬ ಪ್ರಶ್ನೆ ನಿನ್ನಲ್ಲಿ ರಬಹುದು. ಊಹುಂ, ಹೆಣ್ಣಿಗೆ ಪಾಪಪ್ರಜ್ಞೆ ಇರುವುದಿಲ್ಲ. ಆದ್ದರಿಂದಲೇ ಪ್ರಪಂಚದಲ್ಲಿ ಶಾಂತಿ ಎಂಬುದಿರುವುದು' ಎಂದು ನಕ್ಕರು ರಾನಡೆ.

ಕ್ಷಣ ತಡೆದು ರಾನಡೆ ಹೇಳಿದರು, 'ನಮ್ಮ ನಡುವಿನ ಅನ್ಯೋನ್ಯತಾ ಭಾವಕ್ಕೆ ನನ್ನ ಪಾಪಪ್ರಜ್ಞೆ ಅಡ್ಡಿಯಾಗಲಿಲ್ಲ. ಆದರೆ ನನಗೆ ಅರುವತ್ತು ಸುರಭಿಗೆ ಐವತ್ತು ದಾಟಿದ ನಂತರದ ಒಂದು ದಿನ, ಇಂಗ್ಲೆಂಡಿಗೆ ಹೋಗಲು ಆಗದ ಬಗ್ಗೆ ಸುರಭಿ ಎಷ್ಟು ಮಾತಾಡಿದಳು ಎಂದರೆ, ನನಗೆ ಹುಚ್ಚು ಹಿಡಿದಂತಾಗಿ ದುಃಖದಿಂದ ಮನೆ ಬಿಟ್ಟು ಎಲ್ಲೆಲ್ಲಿಗೋ ಹೋಗಿ, ಆರು ತಿಂಗಳ ನಂತರ ಆನಂದದಿಂದ ಮನೆಗೆ ಮರಳಿದೆ.

ಮನೆ ಮುಟ್ಟಿದಾಗ ದೇಹ ಹಗುರಾಗಿತ್ತು, ಮನಸ್ಸು ಹಗುರಾಗಿತ್ತು. ಅದೇಕೋ ನಿನ್ನ ನೆನಪು, ಈ ಆನೆಮಹಲಿನ ನೆನಪು ಆಯಿತು. ಒಮ್ಮೆಯಾದರೂ ಸುರಭಿಯನ್ನು ಇಲ್ಲಿಗೆ ಕರೆದುಕೊಂಡು ಬರಬೇಕು ಎಂದು ಹಲವು ಬಾರಿ ಯೋಚಿಸಿದ್ದೆ.

ಸುತ್ತಾಟ ಕೊನೆಗೊಳಿಸಿ ಮನೆ ಮುಟ್ಟಿದ ಮರುದಿನ ನಾನು ಸುರಭಿಯೊಡನೆ ಅಳುಕು ಅಂಜಿಕೆ ತೊರೆದು, 'ಸುರಭಿ, ನಾನು ಹಲವು ಬಾರಿ ಹೇಳಿದ್ದ ಆನೆಮಹಲಿಗೆ ಒಮ್ಮೆ ನಿನ್ನನ್ನು ಕರೆದುಕೊಂಡು ಹೋಗಬೇಕನಿಸಿದೆ, ಹೋಗೋಣ್ವಾ?' ಎಂದು ಕೇಳಿದೆ.

'ಆನೆಮಹಲ್? ನಿಮ್ಮ ನರಹರಿಯ ಮನೆ?' ಗೊತ್ತಿದ್ದೂ ಪ್ರಶ್ನಾರ್ಥಕವಾಗಿ ಹುಬ್ಬೇರಿಸಿದಳು ಸುರಭಿ. 'ಹೌದು ನನ್ನ ನರಹರಿಯ ಮನೆ' ಎನ್ನಬೇಕೆನಿಸಿದರೂ ಬೇಡ ಎಂದುಕೊಂಡು ಹೌದು ಎಂದಷ್ಟೇ ಹೇಳಿದೆ. ಅನಂತರ, ಆನೆಮಹಲ್ ಎಂಬ ಜಾಗದ ಪ್ರಕೃತಿ ಸೌಂದರ್ಯ, ಹವೆ ಇತ್ಯಾದಿ ಎಲ್ಲವನ್ನೂ ವರ್ಣಿಸಿದೆ.

ನಿನ್ನನ್ನು ಅವಳಿಗೆ ಗೊತ್ತು ನರಹರಿ, ನಿನಗೂ ಅವಳನ್ನು ಗೊತ್ತು. ಸ್ವಲ್ಪ ಹೊತ್ತಿನ ಧ್ಯಾನದ ನಂತರ, 'ಅದೇನು ಸ್ವರ್ಗವೆ?' ಎಂದಳು ಸುರಭಿ.

ನಗರದಲ್ಲಿ ಹುಟ್ಟಿ ಬೆಳೆದವರಿಗೆ ನಗರ ಸ್ವರ್ಗವಾಗಿರುವುದು, ಹಳ್ಳಿ ನರಕ ಅಥವಾ ಇನ್ನೇನೋ ಆಗಿರುವುದು ಸ್ವಾಭಾವಿಕ ಎಂದೆನಿಸಿತು.

'ಹಾಗೆಲ್ಲ ಯಾಕೆ ಯೋಚಿಸುತ್ತಿ ಸುರಭಿ? ಎಷ್ಟೋ ಕಾಲದಿಂದ ನಾವು ಎಲ್ಲಿಗೂ ಹೋಗಿಲ್ಲ. ನರಹರಿ ನನ್ನ ಸ್ಟೂಡೆಂಟಾಗಿದ್ದ. ನನಗೆ ಬಹಳ ಇಷ್ಟವಾದ ಹುಡುಗನಾಗಿದ್ದ. ನಮ್ಮ ಮನೆಗೆ ಹಲವು ಸಲ ಬಂದಿದ್ದ. ನಮ್ಮ ಮಕ್ಕಳನ್ನು ಕೂಡ ನರಹರಿಗೆ ಚೆನ್ನಾಗಿ ಗೊತ್ತು. ನರಹರಿ ಒಳ್ಳೆಯವನು, ಸಹೃದಯಿ, ಜೆಮ್ ಆಫ್ ಎ ಜಂಟ್ಲ್ ಮ್ಯಾನ್ ಅಂತೀವಲ್ಲ, ಅಂಥವನು. ಹೋಗಿ ಎರಡು ದಿನ ಇದ್ದು ಬರೋಣ. ಒಂದು ಹೊಸ ಊರು ಕಂಡ ಹಾಗಾಗುತ್ತೆ. ಜಸ್ಟ್ ಫಾರ್ ಎ ಚೇಂಜ್ ಎಂದೆ. ಸುರಭಿ ಕುಳಿತಲ್ಲಿಂದ ಎದ್ದು ಒಳನಡೆದಳು' ರಾನಡೆಯೆಂದರು.

'ಸುರಭಿಗೆ ನನ್ನ ಮೇಲೆ ತುಂಬಾ ಪ್ರೀತಿಯಿದೆ ನರಹರಿ. ಎಷ್ಟು ಅಂದರೆ, ಶೇಕ್ಸ್‌ಪಿಯರನ ನಾಟಕ 'ಕಿಂಗ್ ಲಿಯರ್'ನಲ್ಲಿ ಅವನ ಮುದ್ದಿನ ಮಗಳು ಕಾರ್ಡಿಲಿಯ ಹೇಳ್ತಾಳಲ್ಲಾ, 'ನೈದರ್ ಮೋರ್ ನೋರ್ ಲೆಸ್' ಅಂತ, ಹಾಗೆ, ಅಷ್ಟು' ಎಂದು ಜೋರಾಗಿ ನಕ್ಕರು ರಾನಡೆ. ಅದರೊಂದಿಗೆ ಹೊರನೆಗೆದ ಕಣ್ಣೀರು ನರಹರಿಯ ಕಣ್ಣುಗಳಲ್ಲಿಯೂ ಕಣ್ಣೀರು ತಂದಿತು.

**(ಸಶೇಷ)**